ಬೆಳಗಾಗುವುದರೊಳಗೆ ಸತ್ತು ಹೋಗಬೇಕೆನ್ನುವಷ್ಟು ಜೀವದಲ್ಲಿ ಚಿಟುಕುಮಳ್ಳಾಡಿಸುತ್ತಿತ್ತು ಮನಸ್ಸು. ಮುಖದಲ್ಲಿ ಮತ್ತದೆ ನಿರಾಸೆಯ ಕರೀಮೋಡ ಘನಗೊಳ್ಳುತ್ತಾ... ಎತ್ತರದಲ್ಲಿ ಯಾರ ಕಣ್ಣಿಗೂ ಕಾಣದಷ್ಟು ದೂರದಲ್ಲೇ ಉಳಿದಂತೆ, ಅವ್ಯಕ್ತವಾಗುಳಿದ ಆ ಮನಸಿನ ಮಾತುಗಳಿಗೆ ಯಾವ ಕೋಡುಬಾಲಗಳು ಮೂಡದೆ, ಮತ್ತದೇ ಖಾಲಿತನದ ಒಣಬಿಸಿಲಿನ ಝಳಕ್ಕೆ ಶ್ರುತಿಗೊಂಡವು.

★★★

ದಿವಸ ಗೊತ್ತೂವಳಿ ಆದದ್ದೆ ತಡ ಎಲ್ಲದಕ್ಕೂ ಸಜ್ಜಾದಂತೆ ಒಂದೊಂದೆ ಸಾಮಾನು ಸರಂಜಾಮುಗಳು ಅಟ್ಟವನ್ನೇರಿ ಕೂತವು. ಮದುಮಗಳ ಮೈ ಕಾವಿಗೆ ಕೂತಂತೆ ಒಂದು ನಮೂನೆಯ ಕೆಂಪೇರತೊಡಗಿದ್ದೆ ಅವಳಲ್ಲಿ ಸಣ್ಣಪುಟ್ಟ ಬದಲಾವಣೆಗಳು ಕಾಣತೊಡಗಿದವು. ಮೆಹಂದಿಯಿಂದ ತೊಡಗಿ ಕೈ ಬಳೆಯ ಸದ್ದು ಹೆಚ್ಚಾದಂತೆ ಬಂದು ಹೋಗುವ ಬಳಗದವರು ಮನೆತುಂಬ ಗಿಜಿಗುಡತೊಡಗಿದರು. ಅರಿಬಿಸಂತೆ, ಬಾಂಡೆಸಂತೆ, ಕಾಳುಕಡಿ, ರೊಟ್ಟಿ ಹಿಟ್ಟು, ಮಸೂಟ, ಕೈಕಸೂತಿಯ ಗೋಡೆ ಪರದೆ ಬಾಗಿಲುಪರದೆ ಹೀಗೆ ಗೊತ್ತಾಗದಂತೆ ತನ್ನ ತಾನು ಮೈ ಮರೆತು ಬಿಟ್ಟಿದ್ದಳು. ಇದೇ ಮೊದಲ ಕಾರ್ಯವೆಂಬ ಹರ್ಷ ಅವ್ವನ ಮುಖದಲ್ಲಿ ಅರಳಿ ನಿಂತಿತ್ತು. ತಾನು ಹೇಳಬೇಕಾದವರ ಮತ್ತು ಮುಯ್ಯಿ ಮಾಡಿದವರನ್ನ ಕರೆಯಬೇಕಾದ

